**ಓ.ಎಸ್ ನಂ.117/2020**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ದಿಃ23.07.2021ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ -ವಾದಿ ಪರ ಶ್ರೀ.ಎ.ಆರ್.ಆರ್. ವಕೀಲರಿಂದ.**

ಸಾಕ್ಷಿ ಇಂದು ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

**ದಿಃ10.03.2017ರ** ಕ್ರಯದ ಕರಾರು ಪತ್ರವನುನ್ನ **ನಿಪಿ-1** ಎಂದು**,** ಅದರಲ್ಲಿನ ಸಾಕ್ಷಿದಾರರ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪುಟ 3ರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ-1(ಎ)** ಎಂದು ಬರೆದುಕೊಟ್ಟರವರ ಸಹಿ ಒಂದನೇ ಪ್ರತಿವಾದಿಯ ಗಂಡನ ಸಹಿಯನ್ನು **ನಿಪಿ-1(ಬಿ)** ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಅಪ್ಪ ಜಯ, ಮರಿದಿಮ್ಮಯ್ಯ ಮೋಹನ್ ಎಂಬುವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ.

2. ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು **ನಿಪಿ-1ರ** ಪತ್ರ ನೋಂದಾವಣಿ ಆಗಿಲ್ಲ ಎಂಬ ಕಾರಣಕ್ಕೆ ನಿಶಾನೆಯಾಗಿ ಗುರುತಿಸಲು ತಕರಾರು ಮಾಡಿರುತ್ತಾರೆ. ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ವಿವಾದಿತ ಸ್ವತ್ತಿನ ಸ್ವಾಧೀನ ಹಸ್ತಾಂತರ ಆಗಿಲ್ಲದ ಕಾರಣ ನೊಂದಾವಣೆ ಕಡ್ಡಾಯವಲ್ಲ ಎಂದು ವಕೀಲರು ತಕರಾರನ್ನು ಅಲ್ಲಗೆಳೆಯಲಾಯಿತು.

3. **ದಿಃ22.05.2019**ರಂದು ಪ್ರತಿವಾದಿಗಳಿಗೆ ನೀಡಿದ ನೋಟಸ್‌ನ ಕಛೇರಿ ಪ್ರತಿಯನ್ನು **ನಿಪಿ-2** ಎಂದು**, ಮೂರು** ಅಂಚೆ ರಸೀದಿ ಹಾಗೂ **ಮೂರು** ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ **ನಿಪಿ-3 ರಿಂದ ನಿಪಿ-8** ಎಂದು**, ದಿಃ10.06.2019**ರಂದು ಪ್ರತಿವಾದಿಗಳು ನೀಡಿದ ಪ್ರತ್ಯೂತ್ತರ ಪತ್ರವನ್ನು **ನಿಪಿ-9** ಎಂದು**,** ದಾವಾ ಸ್ವತ್ತಿಗೆ ಸಂಬಂಧಿಸಿದ **ಮೂರು** ಆರ್‌ಟಿಸಿ ಪ್ರತಿಗಳನ್ನು **ನಿಪಿ-10ರಿಂದ ನಿಪಿ-12** ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.